# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1143 |
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ. ನಮೋಶಿ<br>(ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 22.09.2022 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರಸ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು; | ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಮತ್ತು ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಪೊಲೀಸ್ ಇಲಾಖೆಯಲ್ಲಿ ಕೈಗೊಂಡ ಕ್ರಮಗಳು:<br>➢ ಪ್ರಮುಖ ಘಟನೆಗಳು ಕಂಡು ಬಂದ ತಕ್ಷಣ ಪ್ರಕರಣ ದಾಖಲಿಸಿ, ಹಿರಿಯ ಪೊಲೀಸ್ ಅಧಿಕಾರಿಗಳು ಘಟನೆ ಜರುಗಿದ ಸ್ಥಳಕ್ಕೆ ಭೇಟಿ ನೀಡಿ ಸೂಕ್ತ ಕಾನೂನು ಕ್ರಮ ಜರುಗಿಸಲಾಗುತ್ತಿದೆ.<br>➢ ಬೀಟ್ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಲಾಗುತ್ತಿರುತ್ತದೆ ಮತ್ತು ಸಭೆಯನ್ನು ನಡೆಸಲಾಗುತ್ತಿದೆ.<br>➢ ಅಂತರ್ ರಾಜ್ಯ ಗಡಿ ಭಾಗಗಳಲ್ಲಿ ಚೆಕ್ ಪೋಸ್ಟ್ ಅಳವಡಿಸಿ ಸಂಶ್ಲೆಯಾಸ್ಪದ ವ್ಯಕ್ತಿಯು ಶಸ್ತ್ರಾಸ್ತ್ರ ಹಾಗೂ ಮಾರಕಾಸ್ತ್ರಗಳನ್ನು ಸಾಗಿಸದಂತೆ ಕ್ರಮಕೈಗೊಳ್ಳಲಾಗುತ್ತಿದೆ.<br>➢ ಸೂಕ್ಷ್ಮ ಪ್ರದೇಶಗಳಲ್ಲಿ ಸಿಸಿಟಿವಿಗಳನ್ನು ಅಳವಡಿಸಿ ಸಂಶಯಾಸ್ಪದ ವ್ಯಕ್ತಿಗಳ ಚಲನ ವಲನಗಳ ಮೇಲೆ ನಿಗಾವಹಿಸಲಾಗಿದೆ.<br>➢ ಠಾಣೆಗಳಲ್ಲಿ ಕಮ್ಯೂನಲ್ ಗೂಂಡಾ, ರೌಡಿ ಶೀಟರ್, ಹಿಸ್ಟರಿ ಶೀಟರ್‌ಗಳನ್ನು ಠಾಣೆಗೆ ಕರೆದು ಪರೇಡ್ ಮಾಡುವಂತೆ ಸೂಚಿಸಲಾಗಿದೆ.<br>➢ ಪುನರಾವರ್ತಿತ ಅಪರಾಧಿಗಳಿಗೆ ಗಡಿಪಾರು ಮಾಡುವಂತೆ ವರದಿ ನಿವೇದಿಸಲಾಗುತ್ತದೆ.<br>➢ ಅಪರಾಧಿಗಳ ಮೇಲೆ ಸೂಕ್ತ ನಿಗಾ ಇಡಲಾಗಿದ್ದು, ಅವರ ಚಲನವಲನಗಳ ಮೇಲೆ ಮತ್ತು ಇಂತಹ ಯಾವುದೇ ಪ್ರಕರಣಗಳು ಮರುಕಳಿಸದಂತೆ ಕ್ರಮ ವಹಿಸಲಾಗುತ್ತಿದೆ.<br>➢ ಪೊಲೀಸ್ ಇಲಾಖೆಯು ಕೇವಲ ದೈನಂದಿನ ಕರ್ತವ್ಯಗಳನ್ನಷ್ಟೆ ನಿರ್ವಹಿಸದೇ ಸಮಾಜಿಕ ಜಾಲತಾಣಗಳ ಮೇಲೆ ಸಹಾ ನಿಗಾ ಇರಿಸಿ ಅದರಲ್ಲಿ ಪ್ರಚೋದನಾಕಾರಿಯಾಗಿ ಪೋಸ್ಟ್‌ಗಳನ್ನು ಭಿತ್ತರಿಸುವವರ ಮೇಲೆಯೂ ಸಹ ನಿಗಾ ಇರಿಸಿದ್ದು, ಈ ಸಂಬಂಧ ಪ್ರಕರಣವನ್ನು ಸಹ ದಾಖಲಿಸಲಾಗುವುದು.<br>➢ ಪ್ರತಿಯೊಂದು ಸಣ್ಣ ಘಟನೆಯನ್ನು ಗಂಭೀರವಾಗಿ ಪರಿಗಣಿಸಿ ಕೋಮುಗಲಭೆಗಳನ್ನು ತಡೆಯಲು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಎಲ್ಲಾ ಸಮುದಾಯದ ಮುಖಂಡರನ್ನು |

| | | |
|---|---|---|
| | | ಒಟ್ಟುಗೂಡಿಸಿ ನಾಗರಿಕ ಸಮುದಾಯ ಸಭೆ ನಡೆಸಲಾಗುತ್ತಿದೆ ನೆಲಮಟ್ಟದ ಗುಪ್ತಚರ ಸಂಗ್ರಹಣೆ ಮತ್ತು ಬೀಟ್ ಸಿಬ್ಬಂದಿಯಿಂದ ಮುಂಚಿತವಾಗಿಯೇ ಮಾಹಿತಿ ಸಂಗ್ರಹಿಸಿ, ಮೂಲಭೂತವಾದಿ ಗುಂಪುಗಳು ಅಥವಾ ಸಮಾಜ ವಿರೋಧಿ ಅಂಶಗಳ ಮೇಲೆ ನಿಗಾ ಇಡಲಾಗಿದೆ ಇಂತಹ ಸಮಾಜಘಾತುಕ ಚಟುವಟಿಕೆಗಳಲ್ಲಿ ತೊಡಗುವವರ ಮೇಲೆ ಗೂಂಡಾ ಕಾಯಿದೆ ಹಾಕಲಾಗುವುದು. ಅಲ್ಲದೇ ನಿಯಮಿತ ಗಸ್ತು ಸುತ್ತುಗಳನ್ನು, ನೈಟ್ ರೌಂಡ್ ಮತ್ತು ಸೆಕ್ಟರ್ ಸುತ್ತುಗಳನ್ನು ಕಟ್ಟುನಿಟ್ಟಾಗಿ ಮತ್ತು ಪರಿಣಾಮಕಾರಿಯಾಗಿ ಮಾಡಲಾಗುತ್ತಿದೆ. ಗುಡ್ ಮಾರ್ನಿಂಗ್ ಬೀಟ್ ಅನ್ನು ನಿಯಮಿತವಾಗಿ ನಿಯೋಜಿಸಲಾಗುತ್ತಿದೆ ಮತ್ತು ಎಲ್ಲಾ ಮಸೀದಿಗಳು, ಚರ್ಚ್‌ಗಳು ಅವರು ದೇವಾಲಯಗಳಿಗೆ ಭೇಟಿ ನೀಡಲಾಗುತ್ತಿದೆ.<br>➤ ಪೊಲೀಸ್ ಪೆಟ್ರೋಲಿಂಗ್ ವ್ಯವಸ್ಥೆಯು ದಿನವಿಡಿ ಜಾರಿಯಲ್ಲಿರುತ್ತದೆ.<br>➤ 112 ಸಹಾಯವಾಣಿಗೆ ಕರೆ ಮಾಡಿದ ಸಾರ್ವಜನಿಕರಿಗೆ ತ್ವರಿತವಾಗಿ ಘಟನಾ ಸ್ಥಳಕ್ಕೆ ಧಾವಿಸಿ ಸ್ಪಂದಿಸಲಾಗುತ್ತದೆ. |
| ಆ | ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಇಲಾಖೆಯಲ್ಲಿ ಪೊಲೀಸ್ ಸಿಬ್ಬಂದಿಗಳ ಕೊರತೆ ಇದೆಯೇ; | ಪ್ರಸ್ತುತ ಇಲಾಖೆಯಲ್ಲಿ ಹಾಲಿ ಇರುವ ಪೊಲೀಸ್ ಸಿಬ್ಬಂದಿಗಳಿಂದಲೇ ಕಾನೂನು ಮತ್ತು ಸುವ್ಯವಸ್ಥೆಯನ್ನು ಯಶಸ್ವಿಯಾಗಿ ನಿರ್ವಹಿಸಲಾಗುತ್ತಿದೆ. |
| ಇ | ರಾಜ್ಯದಲ್ಲಿ ಖಾಲಿಯಿರುವ ಸಬ್‌ಇನ್ಸ್‌ಪೆಕ್ಟರ್, ಕಾನ್ಸ್‌ಟೇಬಲ್ ದರ್ಜೆಯ ಪೊಲೀಸ್ ಹುದ್ದೆಗಳ ಸಂಖ್ಯೆ ಎಷ್ಟು; | ಪ್ರಸ್ತುತ ಪೊಲೀಸ್ ಇಲಾಖೆಯಲ್ಲಿ ಒಟ್ಟು 12155 ಪಿಎಸ್‌ಐ/ ಪಿಸಿ ಹುದ್ದೆಗಳು ಖಾಲಿ ಇರುತ್ತವೆ. ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಈ | ಖಾಲಿಯಿರುವ ಹುದ್ದೆಗಳನ್ನು ಯಾವ ಕಾಲಮಿತಿಯೊಳಗೆ ಭರ್ತಿ ಮಾಡಿಕೊಳ್ಳಲಾಗುವುದು? | ಮುಂಬಡ್ತಿ ಹುದ್ದೆಗಳನ್ನು ನಿರಂತರವಾಗಿ ಭರ್ತಿ ಮಾಡಲಾಗುತ್ತಿದೆ. ನೇರ ನೇಮಕಾತಿ ಹುದ್ದೆಗಳಲ್ಲಿ ಪ್ರಸ್ತುತ ಎಪಿಸಿ ಹುದ್ದೆಗಳಲ್ಲಿ 3064 ಹೈದ್ರಾಬಾದ್-ಕರ್ನಾಟಕೇತರ ಹುದ್ದೆಗಳಿಗೆ ಅಧಿಸೂಚನೆ ಸಂಖ್ಯೆ: 7/ನೇಮಕಾತಿ/4/2022-23 ದಿನಾಂಕ:12.09.2022 ಮತ್ತು 420 ಹೈದ್ರಾಬಾದ್-ಕರ್ನಾಟಕ ಹುದ್ದೆಗಳಿಗೆ ಅಧಿಸೂಚನೆ ಸಂಖ್ಯೆ: 9/ನೇಮಕಾತಿ/4/2022-23 ದಿನಾಂಕ:12.09.2022ರಲ್ಲಿ ಈಗಾಗಲೇ ನೇಮಕಾತಿ ಅಧಿಸೂಚನೆ ಹೊರಡಿಸಲಾಗಿದೆ. |

ಹೆಚ್‌ಡಿ 537 ಎಸ್‌ಎಸ್‌ಟಿ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು

# Annexture

**KARNATAKA STATE POLICE FORCE PSI TO CPC VACANCY STRENGTH DETAILS**

| S.N | Rank | Vacancy |
|---|---|---|
| 1 | PSI (CIVIL) | 895 |
| 2 | ASI (CIVIL) | 95 |
| 3 | HC (CIVIL) | 368 |
| 4 | PC (CIVIL) | 2874 |
| 5 | RSI (CAR/DAR) | 125 |
| 6 | ARSI (CAR/DAR) | 93 |
| 7 | AHC (CAR/DAR) | 424 |
| 8 | APC (CAR/DAR) | 3512 |
| 9 | RSI (KSRP) | 94 |
| 10 | ARSI (KSRP) | 108 |
| 11 | RHC (KSRP) | 202 |
| 12 | RPC (KSRP) | 2757 |
| 13 | PSI (KSISF) | 102 |
| 14 | ASI (KSISF) | 316 |
| 15 | HC (KSISF) | 5 |
| 16 | PC (KSISF) | 185 |
| | **TOTAL** | **12155** |